ಶ್ರೀ ಎಚ್. ಎಂ. ಚನ್ನಬಸಪ್ಪ.—ನಾರ್ಮಲ್ ನಬ್ ಡಿವಿಷ್‌ನಲ್ಲಿ ಬರೀ ರಸ್ತೆಗಳ ಕೆಲಸ, ಕಟ್ಟಡ ಗಳನ್ನು ಕಟ್ಟತಕ್ಕದ್ದು, ಇವು ಮಾತ್ರ ಬರುತ್ತವೆ. ಇರಿಗೇಷ್ಷ್ ನಬ್‌ಡಿವಿಷ್‌ನಲ್ಲಿ ಬೇರೊಂದು ವಿಧದಲ್ಲಿ ಕೆಲಸ ಎಷ್ಟೆಷ್ಟು ಇರಬೇಕು ಎಂದು ನಿರ್ಧರ ಮಾಡು ತ್ತೇವೆ. Outlay incur ಮಾಡುವುದರ ಮೇಲೆ ಇರಿ ಗೇಷ್ಷ್ ನಬ್‌ಡಿವಿಷ್ಷ್ ಕೆಲಸ ಮಾಡತಕ್ಕದ್ದು ನರಿಯಲ್ಲ.

12-30 P. M.

ಶ್ರೀ ಬಿ. ಹುಚ್ಚೇಗೌಡ.—ಔಟ್‌ಲೆ ನಿರ್ಧಾರ ವಾದರೆ ಏರಿಯಾ ನಿರ್ಧಾರವಾಗುವುದಿಲ್ಲ. They provide an Assistant Engineer for every 10,000 acres.

Sri H. M. CHANNABASAPPA.—The Assistant Engineer has got to go through all the channel areas and see that water is equitably distributed and that one does not expolit the other. Supervision by a responsible officer over irrigation project is very essential; otherwise, if any thing goes wrong, Hon'ble Member will complain here.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಆ ಸ್ಥಳದ ಮಹತ್ತಿನ ಮೇಲೆ ಬಿಟ್ಟಿದ್ದೀರೆಂದು ಕಾಣುತ್ತದೆ ?

Sri H. M. CHANNABASAPPA.—Hon'ble Member may draw his own inference.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತಿಂಗಳು ತಿಂಗಳಿಗೂ ಸಿಬ್ಬಂದಿ ಖರ್ಚು ವ್ಯತ್ಯಾಸವಾಗಲು ಕಾರಣ ವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲು ನನ್ನ ಮುಂದಿಲ್ಲ. ಟಿ. ಎ. ವ್ಯತ್ಯಾಸವಾಗಬಹುದು, ವರ್ಗ ವಾಗಿ ಬರೆದಿದ್ದರೆ ಥಾರ್ಜ್ ಆಗುವುದಿಲ್ಲ. ಇನ್ನೂ ನಾನಾ ಕಾರಣಗಳಿರುತ್ತವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಬೆಂಗಳೂರಿ ನಿಂದ ಹೋಗುವವರ ವಿಚಾರವಲ್ಲದೆ ಅಂದಾಜಿನ ಮೇಲೆ ಅಲ್ಲಿರುವ ಸಿಬ್ಬಂದಿಗೇಕೆ ವ್ಯತ್ಯಾಸವಾಗುತ್ತ ದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲನ್ನು ಮುಂಚೆ ಕೇಳಿದ್ದರೆ ಒದಗಿಸುತ್ತಿದ್ದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಯಾವಾಗ ಸಿಬ್ಬಂದಿಗೆ ಇಷ್ಟು ಖರ್ಚಾಗಿದೆಯೆಂದು ಹೇಳುತ್ತೀರೋ ಆಗ ಅದು ಬದಲಾವಣೆಯಾಗುವುದಕ್ಕೆ ಕಾರಣ ಹೇಳು ವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೊಂದು ವೇಳೆ ಯಾರಾದರೂ ಅಧಿಕಾರಿಗಳನ್ನು ವರ್ಗ ಮಾಡಿರ ಬಹುದು. ಆ ಕಾಲದಲ್ಲಿ ಥಾರ್ಜ್ ಆಗುವುದಿಲ್ಲ. ಬಂದಮೇಲೆ ಪುನಃ ಹೆಚ್ಚಾಗುತ್ತದೆ. ಇದೂ ಒಂದು ಕಾರಣ. ವಿಚಾರಮಾಡಿ ನರಿಯಾಗಿ ಹೇಳಬಹುದು.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—11,867 ರೂಪಾಯಿ ಕೆಲಸವಾಗಿರುವಾಗ ಸಿಬ್ಬಂದಿಗೆ 1,666 ರೂಪಾಯಿ ಖರ್ಚಾಗಿದೆ. 20,745ರೂಪಾಯಿ ಕೆಲಸಕ್ಕೆ 1,381 ರೂಪಾಯಿ ಸಿಬ್ಬಂದಿ ಖರ್ಚಾಗಿದೆ. ಕಡಮೆ ಕೆಲಸವಾದಾಗ ಸಿಬ್ಬಂದಿ ಖರ್ಚು ಜಾಸ್ತಿ ಯಾಗಿ ಜಾಸ್ತಿ ಕೆಲಸವಾದಾಗ ಸಿಬ್ಬಂದಿ ಖರ್ಚು ಕಡಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸಕ್ಕೂ ಸಿಬ್ಬಂದಿ ಖರ್ಚಿಗೂ ಸಂಬಂಧವಿಲ್ಲ. ಒಂದು ತಿಂಗಳು ಹೆಚ್ಚಿನ ಔಟ್‌ಲೇ ಆಗಬಹುದು. ಇನ್ನೊಂದು ತಿಂಗಳು ಮಳೆ ಬಂದು ಕೆಲಸ ನಡೆಯದೇ ಹೋಗಬಹುದು. ಆದ್ದರಿಂದ ಸಿಬ್ಬಂದಿ ವಜಾ ಮಾಡುವುದಕ್ಕಾಗುವು ದಿಲ್ಲ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಹಾಗಾದರೆ ಇಷ್ಟು ಸಿಬ್ಬಂದಿಗೆ ಖರ್ಚಾದರೆ ಇಷ್ಟು ಕೆಲಸವಾಗ ಬೇಕೆಂಬ ಗುರಿ ಇಲ್ಲವೆ ?

ಶ್ರೀ ಎಂ. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ನಾವು ಒಂದೊಂದು ಡಿವಿಜ್‌ನಲ್ಲಿ ಎಷ್ಟು ಕೆಲಸವಾಗ ಬೇಕೆಂಬುದನ್ನು ನೋಡಿ ನಿರ್ಧಾರ ಮಾಡಿರುತ್ತೇವೆ. ಅದು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳ ಲಾಗುತ್ತದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಆಯಾ ತಿಂಗ ಳಲ್ಲಿ ಎಷ್ಟು ಪರ್ಸೆಂಟೇಜ್ ವರ್ಕ್‌ಔಟ್ ಆಗಿದೆಯೆಂದು ಲೆಕ್ಕ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟಾಗಿದೆಯೆಂಬ ಅಂಕಿ ಅಂಶ ತಮ್ಮ ಮುಂದೇ ಇದೆ.

Hindi as Official Language.
(steps taken to enforce)

Q.—286. Sri P. R. RAMAIYA (Basavangudi).—

Will the Government be pleased to state :—

(*a*) what are the steps they have taken to expedite the use of Hindi as an official language in the State of Mysore ;

(*b*) if they intend making it compulsory in the educational system of the State from the Primary stage to the University stage ?

A.—Sri A. G. RAMACHANDRA RAO (Minister for Law and Education).—

(*a*) No steps are yet taken as the question of making Hindi the official language is pending consideration and decision by the Government of India on the report of the Official Language Commission.

(*b*) Hindi has already been introduced as a compulsory non-public examination subject to the High School stage of education. A new curriculum for the 8 year primary course has been prepared in draft form. The study of Hindi from VII class has been included in the curriculum.

ಶ್ರೀ ಪಿ. ಆರ್. ರಾಮಯ್ಯ.—ಹಿಂದಿಯನ್ನು ಸರ್ಕಾರಿ ಅಡಳಿತ ಭಾಷೆಯಾಗಿ ಯಾವ ವರ್ಷದಿಂದ ಉಪಕ್ರಮಿಸಬೇಕೆಂದಿದೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—1961 ರಿಂದ ಎಂದು ರಾಜ್ಯಾಂಗದಲ್ಲಿ ಹೇಳಿರುವ ಹಾಗೆ ಜ್ಞಾಪಕ ವಿದೆ. ಅದನ್ನು ಈಗ ಅಫಿಷಿಯಲ್ ಲ್ಯಾಂಗ್‌ವೇಜ್ ಕಮಿಷನವರು ಇವೆಸ್ಟಿಗೇಟ್ ಮಾಡುತ್ತಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—1961 ರ ಹೊತ್ತಿಗೆ ಪ್ರತಿಯೊಬ್ಬ ಸರ್ಕಾರಿ ನೌಕರನೂ, ಅಧಿಕಾರಿಯೂ ಹಿಂದಿಯನ್ನು ಕಡ್ಡಾಯವಾಗಿ ತಿಳಿದುಕೊಂಡಿರ ಬೇಕೆಂಬ ನಿಯಮವಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಕೆಲವರು ತಿಳಿದು ಕೊಂಡಿರಬಹುದು, ಕೆಲವರು ತಿಳಿದುಕೊಳ್ಳದಿರ ಬಹುದು. ಆ ರೀತಿ ಅವಕಾಶವಿದೆ. ಆದ್ದರಿಂದ ತಿಳಿದೇ ಇರಬೇಕೆಂಬ ನಿರ್ಬಂಧ ಎಲ್ಲರಿಗೂ ಇದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ಅಧಿ ಕಾರಿಗಳೂ ಆ ಅವಧಿಯೊಳಗಾಗಿ ತಿಳಿದುಕೊಳ್ಳ ಬೇಕೆಂದಿಲ್ಲ. ವ್ಯವಹಾರ ನಡೆಸುವುದಕ್ಕೆ ಸಾಧ್ಯ ವಾದಷ್ಟು ಸಿಬ್ಬಂದಿಯಿರಬೇಕೆಂಬುದೇ ಮುಖ್ಯ ಉದ್ದೇಶ.

ಶ್ರೀ ಪಿ. ಆರ್. ರಾಮಯ್ಯ.—ಸೆಕ್ರೆಟೀರಿಯಟ್ ರೆವಲ್ಲನಲ್ಲರುವವರು ಹಿಂದಿ ಭಾಷೆ ತಿಳಿದುಕೊಳ್ಳ ಬೇಕೆಂಬ ಕಡ್ಡಾಯವಿದೆಯೆಂದು ಊಹಿಸಬಹುದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಕಡ್ಡಾಯವಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈಗ ಲ್ಯಾಂಗ್ ವೇಜ್ ಕಮಿಷನ್ ತೀರ್ಮಾನಕ್ಕೆ ಕಾದಿದ್ದೇವೆಂದು ಹೇಳಿದ್ದೀರಿ. ಇದುವರೆಗೆ ಹಿಂದಿ ಒತ್ತಾಯ ಮಾಡುವು ದಕ್ಕೆ ಪ್ಲಾನ್ಡ್ ಪ್ರೋಗ್ರಾಂ ಏನಾದರೂ ಸರ್ಕಾರ ಹಾಕಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೊಸದಾಗಿ ಸೇರುವ ಸರ್ಕಾರಿ ನೌಕರರು ಮತ್ತು 15 ವರ್ಷ ಸರ್ವಿಸ್ ಆಗದಿರುವವರು ಇಂಥವರಿಗೆ ಹಿಂದಿಯಲ್ಲಿ ಒಂದು ಟೆಸ್ಟನ್ನು ಇಡಬೇಕೆಂದು ತೀರ್ಮಾನವಾಗಿ ಯಾವ ರೀತಿ ಅದನ್ನು ಜಾರಿಗೆ ಕೊಡಬೇಕೆಂಬುದು ಪರಿಶೀಲನೆಯಲ್ಲಿದೆ.

ಶ್ರೀ ಪಿ. ಆರ್. ರಾಮಯ್ಯ.—ಈ ಬಗ್ಗೆ ಯಾವಾಗ ತೀರ್ಮಾನವಾಗುತ್ತದೆಂದು ಹೇಳುತ್ತೀರಾ ?

Sri A. G. RAMACHANDRA RAO.—I cannot definitely say.

ಶ್ರೀ ಪಿ. ಆರ್. ರಾಮಯ್ಯ.—ವಿಶ್ವವಿದ್ಯಾ ನಿಲಯದ ಹಂತದವರೆಗೆ ಹಿಂದಿ ಭಾಷೆ ಕಡ್ಡಾಯ ಮಾಡಬೇಕೆಂಬ ವಿಷಯದಲ್ಲಿ ಮತ್ತು ವಿಶ್ವವಿದ್ಯಾ ನಿಲಯದಲ್ಲಿ ಯಾವ ಮಾಡಿಯಂ ಇರಬೇಕೆಂಬ ಬಗ್ಗೆ ಮೈಸೂರು ಸರ್ಕಾರ ಅಫಿಷಿಯಲ್ ಲ್ಯಾಂಗ್‌ವೇಜ್ ಕಮಿಷನ್‌ಗೆ ಮಾಡಿರುವ ಶಿಫಾರ್ಸ್‌ನು ?

Sri A. G. RAMACHANDRA RAO.—I will place it on the Table of the House. ಒಂದು ಮೆಮೋರಾಂಡಂ ಕೊಟ್ಟಿದೆ. ಅದಕ್ಕೆ ರೆಫರ್ ಮಾಡದೆ ಆ ವಿಷಯ ಈಗ ಹೇಳುವುದು ಕಷ್ಟ.

ಶ್ರೀ ಪಿ. ಆರ್. ರಾಮಯ್ಯ.—ಹಿಂದೆ ಭಾಷೆ ಕಡ್ಡಾಯವಾಗಿ ಮಾಡಿಯಂ ಆಗಿರಬೇಕೆಂದು ಶಿಫಾರ್ಸು ಮಾಡಿದ್ದೀರಾ ?

Sri A. G. RAMACHANDRA RAO.—I do not want to answer offhand.

ಶ್ರೀ ಪಿ. ಆರ್. ರಾಮಯ್ಯ.—ಇದು ಬಹಳ ಮುಖ್ಯ ವಾದ ವಿಷಯವಾದ್ದರಿಂದ ಸಭೆಗೆ ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸಿದ್ದೇವೆ, ಪುನಃ ಈಗ ತಿಳಿಸಬೇಕಾದರೆ ವರ್ಡಿಂಗ್ ಜ್ಞಾಪಕವಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಹಿಂದಿ ಭಾಷೆ ಮಾಡಿಯಂ ಆಗಿರಬೇಕೆಂದು ತಿಳಿಸಿದ್ದೀರಾ ಅಥವಾ ಕನ್ನಡ ಭಾಷೆ ಮಾಡಿಯಂ ಆಗಿರಬೇಕೆಂದು ತಿಳಿ ಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಜ್ಞಾಪಕವಿರುವ ಹಾಗೆ ಹಿಂದಿ ಭಾಷೆಯೇ ಆಗಬೇಕೆಂದು ತಿಳಿಸಿದೆ. ಅವಾಗವವರೆಗೆ ಇಂಗ್ಲೀಷೇ ಮುಂದು ವರೆಯಲೆಂದು ಹೇಳಿರಬೇಕು.

ಶ್ರೀ ಪಿ. ಆರ್ ರಾಮಯ್ಯ.—ವಿಶ್ವವಿದ್ಯಾನಿಲಯ ದಲ್ಲಿ ಕನ್ನಡ ಮಾಧ್ಯಮವಿರಬೇಕೆಂದು ಸೆನೇಟ್‌ನವರು ಶಿಫಾರ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೆಸಲ್ಯೂಷ್ನ ನನ್ನ ಗಮನಕ್ಕೆ ಬಂದಿಲ್ಲ. ಪತ್ರಿಕೆಗಳಲ್ಲಿ ನೋಡಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದಲ್ಲಿ ಮಾರ್ಪಾಡು ಮಾಡುವಾಗ ಸೆನೇಟ್ ಮತ್ತು ಯೂನಿವರ್ಸಿಟಿ ಕೌನ್ಸಿಲ್ ಅಭಿಪ್ರಾಯ ತಿಳಿದುಕೊಂಡು ಅದಕ್ಕನುಗುಣವಾಗಿ ಸರ್ಕಾರದವರು ತಮ್ಮ ಅಭಿಪ್ರಾಯ ಸೂಚಿಸುವರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಅಭಿ ಪ್ರಾಯದಲ್ಲಿ ಅವರೂ ಸರ್ಕಾರದ ಅಭಿಪ್ರಾಯ ತಿಳಿದು ಕೊಳ್ಳಬೇಕು, ನಾವೂ ಅವರ ಅಭಿಪ್ರಾಯ ತಿಳಿದು ಕೊಂಡು, ಉಭಯತ್ರರೂ ಸಮರನತೆಯಿಂದ ಮುಂದು ವರೆಯಬೇಕು.

ಶ್ರೀ ಪಿ. ಆರ್. ರಾಮಯ್ಯ.—ಈ ವಿಷಯದಲ್ಲಿ ಈಗ ಯೂನಿವರ್ಸಿಟಿಯು ಅಭಿಪ್ರಾಯವೇನಿದೆಯೋ ಅದಕ್ಕೆ ಹೊಂದುಕೊಳ್ಳುವಂತೆ ಸರ್ಕಾರ ಒಂದು ಅಭಿ ಪ್ರಾಯಕ್ಕೆ ಬರಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉಭಯತಾಪಿ ಆ ಪ್ರಯತ್ನ ನಡೆಯಬೇಕು.

ಶ್ರೀ ಪಿ. ಆರ್. ರಾಮಯ್ಯ.—ಶಾಸನಸಭೆಗಳ ಅಭಿಪ್ರಾಯವನ್ನಾದರೂ ತಿಳಿದು ವಿಶ್ವವಿದ್ಯಾನಿಲಯ ದಲ್ಲಿ ಯಾವ ಮಾಡಿಯಂ ಇರಬೇಕೆಂಬ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ರಾಜ್ಯಾಂಗದಲ್ಲೇ ಅಡಕವಾಗಿದೆ. ಅದನ್ನು ಬದ ಲಾಯಿಸುವುದಕ್ಕೆ ನಮಗೆ ಅಧಿಕಾರವಿಲ್ಲ. ನಮ್ಮ ಅಭಿಪ್ರಾಯ ಬೇಕಾದರೆ ವ್ಯಕ್ತಪಡಿಸಬಹುದು.

ಶ್ರೀ ಪಿ. ಆರ್. ರಾಮಯ್ಯ.—ಸರ್ಕಾರದ ವ್ಯವ ಹಾರ ಹಿಂದಿಯಲ್ಲಾಗಬೇಕೆಂದಿದೆ. ಆದರೆ ಯೂನಿ ವರ್ಸಿಟಿಯಲ್ಲಿ ಮಾಡಿಯಂ ಹಿಂದಿಯಾಗಬೇಕೆಂದು ರಾಜ್ಯಾಂಗದಲ್ಲಿ ಬೈಡಿಂಗ್ ಇದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೂನಿ ವರ್ಸಿಟಿ ವಿಚಾರದಲ್ಲಿ ಇಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಆದ್ದರಿಂದ ಈ ವಿಚಾರ ದಲ್ಲಿ ಶಾಸನ ಸಭೆಗಳ ಅಭಿಪ್ರಾಯ ತಿಳಿದು ಸರ್ಕಾರ ದವರು ಅದರಂತೆ ಯೂನಿವರ್ಸಿಟಿ ಶಿಫಾರ್ಸಿನಂತೆ ಕನ್ನಡ ಮಾಧ್ಯಮವಾಗಬೇಕೆಂದು ಅಭಿಪ್ರಾಯ ಮಾರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಅಭಿ ಪ್ರಾಯದಲ್ಲ ಹಿಂದೂದೇಶದ ಒಗ್ಗಟ್ಟು ಮತ್ತು ಸೆಕ್ಯೂ ರಿಟಿ ದೃಷ್ಟಿಯಿಂದ ಯೂನಿವರ್ಸಿಟಿಗಳಲ್ಲಿ ಬೇರೆ ಬೇರೆ ಭಾಷೆಯಿದ್ದರೆ ಒಳ್ಳೆಯದಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಸ್ವಂತ ಅಭಿಪ್ರಾಯ ನಾನು ಕೇಳುತ್ತಿಲ್ಲ, ಸರ್ಕಾರದ ಅಭಿಪ್ರಾಯ ನಾನು ಕೇಳುತ್ತಿರುವುದು. ಸರ್ಕಾರದ ಅಭಿಪ್ರಾಯ ಶಾಸನ ಸಭೆಗಳ ಅಭಿಪ್ರಾಯಕ್ಕನುಗುಣವಾಗಿರ ಬೇಡವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕನು ಗುಣವಾಗಿಯೇ ಇದೆಯೆಂಬ ಭರವಸೆಯಿದೆ.

ಶ್ರೀ ಎ. ಭೀಮಪ್ಪನಾಯಕ್.—ಮಾತೃಭಾಷೆಯನ್ನು ಅನೇಕ ಪ್ರಾಂತಗಳಲ್ಲಿ, ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಮಾಡಿಯಂ ಆಫ್ ಇನ್ಸ್ಟ್ರಕ್ಷನ್ ಆಗಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ಕಡೆ ಇಲ್ಲ, ಕೆಲವು ಕಡೆ ಹಾಗಿರುವುದು ಗಮನಕ್ಕೆ ಬಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಆ ಕೆಲವು ಪ್ರಾಂತಗಳಲ್ಲಿ ಮ್ಯೊನೂರೂ ಏಕೆ ಒಂದಾಗಬಾರದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಒಳ್ಳೆಯದಲ್ಲವೆಂದು ನನಗೆ ಕಾಣುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಈ ಸಂದರ್ಭದಲ್ಲಿ ಒಂದು ನಿರ್ದಿಷ್ಟವಾದ ಪ್ರಶ್ನೆಯನ್ನಿಟ್ಟು ಈ ಸಭೆಯ ಅಭಿಪ್ರಾಯ ಪಡೆಯುವುದಕ್ಕೆ ಮುಂಚೆ ಸರ್ಕಾರದವರು ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ಸೂಚಿಸಲು ಪ್ರಾರಂಭಿಸಿದರೆ ಆದು ಚೆನ್ನಾಗಿರುತ್ತದೆಯೆ ? ಹಾಗೆ ಮಾಡಿದರೆ ಅದು ದೇಶದ ಹಿತವನ್ನು ಕಾಪಾಡುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಇಲ್ಲಿಯ ಮಾನ್ಯ ಸದಸ್ಯರ ಅಭಿಪ್ರಾಯಕ್ಕನುಗುಣವಾಗಿಯೇ ಇದೆಯೆಂಬ ಭಾವನೆಯಿದೆ.

ಶ್ರೀ ಎ. ಭೀಮಪ್ಪನಾಯಕ್.—ನನಗೆ ತಮ್ಮ ಅಭಿಪ್ರಾಯವೇನಿದೆ ಎನ್ನುವುದು ಬೇಕಾಗಿಲ್ಲ. ತಾವು ಆ ವಿಚಾರವನ್ನು ಈ ಸಭೆಯ ಮುಂದಿಟ್ಟು ಆ ಬಗ್ಗೆ ಈ ಸಭೆಯ ಅಭಿಪ್ರಾಯ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಿದ್ದೇನೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ತಿಳಿದ ಮಟ್ಟಿಗೆ ಆ ವಿಚಾರವೇನೂ ಇದ್ದ ಹಾಗೆ ಕಾಣುವುದಿಲ್ಲ. ತಾವುಗಳೆಲ್ಲರೂ ಸಭೆಯ ಮುಂದೆ ಆ ವಿಚಾರವನ್ನು ಇಡಬೇಕೆಂದರೆ ಇಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕ್.—ಈ ವಿಚಾರದಲ್ಲಿ ತಮ್ಮ ಅಭಿಪ್ರಾಯ ಅಥವಾ ತಮ್ಮ ಭಾವನೆ ಏನಿದೆ ಎಂಬುದನ್ನು ತಿಳಿಸುವುದಕ್ಕೆ ಬದಲಾಗಿ ಈ ಸಭೆಯ ಅಭಿಪ್ರಾಯ ಯಾವ ರೀತಿಯಲ್ಲೇ ಆಗಲಿ ಅಥವಾ ಯಾವ ಸ್ಟೇಜಿನಲ್ಲೇ ಆಗಲಿ ಯಾವ ರೀತಿಯಿದೆ ಎಂಬುದನ್ನು ತಿಳಿದುಕೊಳ್ಳಲು ಈ ವಿಚಾರವನ್ನು ಈ ಸಭೆಯ ಮುಂದಿಟ್ಟು ಅದರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

Sri M. PALANIYAPPAN.—Have the Government given their opinion, or is it the opinion of the concerned Minister that is given ?

Mr. SPEAKER.—You are asking a question about the Official Language Commission. You could have tabled a separate question.

Sri M. PALANIYAPPAN.—My point is : the Government have recommended the adoption of Hindi as the official language and I want to ascertain whether it is correct or not.

Sri A. G. RAMACHANDRA RAO.—We have placed our views on the Table of the House ; we have distributed copies to all the members.

Sri M. PALANIYAPPAN.—May I know the amount of money that is spent by Government in spreading the use of Hindi among the officers ?

Sri A. G. RAMACHANDRA RAO.—So far, for that specific purpose we have not spent any money.

Bhadra Reservoir (Steps to bring waste lands under the plough).

Q.—12. Sri B. MADHAVACHAR (Bhadravati).—

Will the Government be pleased to state :—

(*a*) the extent of cultivable waste land coming under the right and left bank channels of Bhadra Reservoir project (talukwar) up to the Tunnel ;

(*b*) the steps they intend taking to bring these lands under the plough ?

A.—Sri H. M. CHANNABASAPPA (Minister for Industries).—

(*a*) The extent of cultivable Government hulbanni, waste land, cattle reserve, etc., under the channels of the Bhadra Project (up to the Tunnel, in the case of the Right Bank Channel) is given below.

	Acres	*Guntas*
(i) Right Bank Channel—		
Tarikere Taluk ...	4,754	0
Bhadravathi Taluk ...	8,198	1
Shimoga Taluk ...	1,105	25
(ii) Left Bank Channel—		
Shimoga Taluk ..	2,863	0
Bhadravathi Taluk ...	1,368	0

(*b*) The following measures have been taken to bring these lands under cultivation :—

(i) An extent of 10,000 acres of land in the Taluks of Bhadravathi, Tarikere and Narasimharajapura has been reserved for being granted to people whose lands or villages come under submersion ;